# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 701 (820) |
| ಸದಸ್ಯರ ಹೆಸರು | : | ಶ್ರೀ ಹೆಚ್.ಎಂ. ರಮೇಶ ಗೌಡ<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 15-12-2020 |
| ಉತ್ತರಿಸುವ ಸಚಿವರು | : | ಮಾನ್ಯ ನಗರಾಭಿವೃದ್ಧಿ ಸಚಿವರು. |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ರಾಜ್ಯದ ಪ್ರಮುಖ ನಗರಗಳ ಮೂಲಸೌಕರ್ಯ ಅಭಿವೃದ್ಧಿಗಾಗಿ ಪ್ರಸಕ್ತ ಸಾಲಿನಲ್ಲಿ ಮೀಸಲಿಟ್ಟ ಅನುದಾನವೆಷ್ಟು; (ಅಂಕಿ-ಅಂಶ ನೀಡುವುದು)</td><td>
ನಗರಗಳ ಮೂಲ ಸೌಕರ್ಯ ಅಭಿವೃದ್ಧಿಗಾಗಿ ಪ್ರಸಕ್ತ ಸಾಲಿನಲ್ಲಿ 15ನೇ ಹಣಕಾಸು ಆಯೋಗ ಅನುದಾನ, ಅಮೃತ್ ಯೋಜನೆ,ಎಸ್.ಎಫ್.ಸಿ ಮುಕ್ತನಿಧಿ, ನಗರೋತ್ಥಾನ 3ನೇ ಹಂತ, ಮಹಾತ್ಮಗಾಂಧಿ ವಿಕಾಸ ಯೋಜನೆ, ಸ್ವಚ್ಛ ಭಾರತ್ ಮಿಷನ್ ನಿಧಿಯಡಿ ಈ ಕೆಳಗಿನಂತೆ ಅನುದಾನ ಮೀಸಲಿರಿಸಿದೆ.
<u>15ನೇ ಹಣಕಾಸು ಆಯೋಗದ ಅನುದಾನ / ಅಮೃತ್ ಯೋಜನೆ:</u>
(ರೂ.ಕೋಟಿಗಳಲ್ಲಿ)
<table>
<tr><th>ಕ್ರ. ಸಂ</th><th>ಅನುದಾನ / ಯೋಜನೆಯ ವಿವರ</th><th>ಹಂಚಿಕೆಯಾದ ಅನುದಾನ</th></tr>
<tr><td>1.</td><td>15ನೇ ಹಣಕಾಸು ಆಯೋಗದ ಅನುದಾನ</td><td></td></tr>
<tr><td></td><td>1) ರಾಜ್ಯದ 10 ಮಹಾನಗರ ಪಾಲಿಕೆಗಳಿಗೆ</td><td>311.07</td></tr>
<tr><td></td><td>2) ನಗರಸಭೆ ಮತ್ತು ಪಟ್ಟಣ ಪಂಚಾಯಿತಿಗಳಿಗೆ</td><td>550.59</td></tr>
<tr><td></td><td>3) ಪಟ್ಟಣ ಪಂಚಾಯಿತಿ ಮತ್ತು ಅಧಿಸೂಚಿತ ಪ್ರದೇಶ ಸಮಿತಿಗಳಿಗೆ</td><td>129.34</td></tr>
<tr><td></td><td>ಒಟ್ಟು</td><td>991.00</td></tr>
<tr><td>2</td><td>ಕೇಂದ್ರ ಪುರಸ್ಕೃತ 'ಅಮೃತ್' ಯೋಜನೆ</td><td>311.07</td></tr>
</table>
<u>ಎಸ್.ಎಫ್.ಸಿ ಮುಕ್ತನಿಧಿ:</u>
(ರೂ.ಕೋಟಿಗಳಲ್ಲಿ)
<table>
<tr><th>ಕ್ರ. ಸಂ</th><th>ಅನುದಾನ / ಯೋಜನೆಯ ವಿವರ</th><th>ಹಂಚಿಕೆಯಾದ ಅನುದಾನ</th></tr>
<tr><td>1</td><td>ಮಹಾನಗರ ಪಾಲಿಕೆಗಳು</td><td>151.74</td></tr>
<tr><td>2</td><td>ನಗರಸಭೆ, ಪುರಸಭೆಗಳು</td><td>118.57</td></tr>
<tr><td>3</td><td>ಪಟ್ಟಣ ಪಂಚಾಯಿತಿ/ ಅಧಿಸೂಚಿತ ಪ್ರದೇಶ ಸಮಿತಿ</td><td>28.68</td></tr>
<tr><td></td><td>ಒಟ್ಟು</td><td>298.99</td></tr>
</table>
<u>ನಗರೋತ್ಥಾನ 3ನೇ ಹಂತ/ ಮಹಾತ್ಮಗಾಂಧಿ ವಿಕಾಸ ಯೋಜನೆ:</u>
ಮಹಾನಗರಪಾಲಿಕೆಗಳ ರೂ. 100 ಕೋಟಿ ನಗರೋತ್ಥಾನ 3ನೇ ಹಂತ ಹಾಗೂ ವಿಶೇಷ ಅನುದಾನದಡಿ 2020-21ನೇ ಸಾಲಿನ ಆಯವ್ಯಯದಲ್ಲಿ ರೂ. 73.20 ಕೋಟಿಗಳನ್ನು ಮೀಸಲಿರಿಸಲಾಗಿದೆ.
</td></tr>
</table>

| | | |
|---|---|---|
| | | ರಾಜ್ಯದ 10 ಮಹಾನಗರಪಾಲಿಕೆಗಳಾದ ಮೈಸೂರು, ಮಂಗಳೂರು, ಹುಬ್ಬಳ್ಳಿ-ಧಾರವಾಡ, ಬೆಳಗಾವಿ, ಕಲಬುರಗಿ, ಬಳ್ಳಾರಿ, ದಾವಣಗೆರೆ, ಶಿವಮೊಗ್ಗ, ವಿಜಯಪುರ ಮತ್ತು ತುಮಕೂರು ಮಹಾನಗರಪಾಲಿಕೆಗಳಿಗೆ "ಮಹಾತ್ಮಗಾಂಧಿ ನಗರ ವಿಕಾಸ ಯೋಜನೆ" ಯನ್ನು 2019-20ನೇ ಸಾಲಿನಲ್ಲಿ 2023-24 ರವರೆಗೆ 04 ವರ್ಷಗಳ ಅವಧಿಯಲ್ಲಿ ಅನುಷ್ಠಾನಗೊಳಿಸಲು ರೂಪಿಸಲಾಗಿರುತ್ತದೆ. ಪ್ರಸಕ್ತ ಸಾಲಿನಲ್ಲಿ ರೂ. 50.00 ಕೋಟಿಗಳನ್ನು ಮೀಸಲಿರಿಸಲಾಗಿದೆ.<br><br>**<u>ಸ್ವಚ್ಛ ಭಾರತ್ ಮಿಷನ್:</u>**<br>ರಾಜ್ಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ವೈಯಕ್ತಿಕ ಶೌಚಾಲಯ, ಸಮುದಾಯ ಶೌಚಾಲಯ / ಸಾರ್ವಜನಿಕ ಶೌಚಾಲಯ ಮತ್ತು ಘನತ್ಯಾಜ್ಯ ವಸ್ತು ನಿರ್ವಹಣೆಗಾಗಿ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ. ಪ್ರಸಕ್ತ ಸಾಲಿನಲ್ಲಿ ಮುಖ್ಯಮಂತ್ರಿ ನಗರ ನೈರ್ಮಲ್ಯ ಯೋಜನೆ (ಸ್ವಚ್ಛ ಭಾರತ ಮಿಷನ್) ಅಡಿ ರೂ.200.00 ಕೋಟಿಗಳ ಅನುದಾನವನ್ನು ಮೀಸಲಿಡಲಾಗಿರುತ್ತದೆ. |
| (ಆ) | ರಾಜ್ಯದ ವಿವಿಧ ನಗರಗಳಲ್ಲಿ ರಸ್ತೆ ಕಾಮಗಾರಿಗಳು ನೆನೆಗುದಿಗೆ ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಅಪೂರ್ಣಗೊಂಡ ಕಾಮಗಾರಿಗಳ ಸಂಪೂರ್ಣ ಮಾಹಿತಿ ನೀಡುವುದು; | ಸರ್ಕಾರದ ಗಮನಕ್ಕೆ ಬಂದಿದೆ.<br><br>ರಾಜ್ಯ ವಿವಿಧ ನಗರಸ್ಥಳೀಯ ಸಂಸ್ಥೆಗಳಿಗೆ ಮಂಜೂರಾಗಿ ಅನುಷ್ಠಾನದಲ್ಲಿದ್ದ ಕಾಮಗಾರಿಗಳು ಕೋವಿಡ್-19ರ ಕಾರಣದಿಂದ ಲಾಕ್‌ಡಾನ್ ಹೇರಲ್ಪಟ್ಟ ಸಂದರ್ಭದಲ್ಲಿ ಸ್ಥಗಿತವಾಗಿರುತ್ತದೆ. ಆದರೆ ಲಾಕ್‌ಡೌನ್ ತೆರವುಗೊಂಡ ನಂತರ ಪ್ರಗತಿಯಲ್ಲಿದ್ದ ಕಾಮಗಾರಿಗಳನ್ನು ಮುಂದುವರೆಸಲಾಗಿರುತ್ತದೆ. |
| (ಇ) | ರಸ್ತೆ ಮತ್ತು ಮೂಲಸೌಕರ್ಯ ಕಾಮಗಾರಿಯ ಗುತ್ತಿಗೆದಾರರು ವಿವಿಧ ಯೋಜನೆಗಳಲ್ಲಿ ಕಳಪೆ ಕಾಮಗಾರಿಗಳನ್ನು ಕೈಗೊಂಡು ಬಿಲ್‌ನ ಮೊತ್ತ ಪಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದಲ್ಲಿ, ಅಂತಹ ಗುತ್ತಿಗೆದಾರರ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು ? | ನಗರೋತ್ಥಾನ ಯೋಜನೆಯ ಕಾಮಗಾರಿಗಳ ಗುಣಮಟ್ಟದ ಮೇಲ್ವಿಚಾರಣೆಗಾಗಿ ಯೋಜನಾ ಅನುಷ್ಠಾನ ಸಮಾಲೋಚಕರನ್ನು (Project Implementation Consultant) ನೇಮಕ ಮಾಡಲಾಗಿರುತ್ತದೆ. 14ನೇ ಹಣಕಾಸು ಯೋಜನೆ ಮತ್ತು ಎಸ್.ಎಫ್.ಸಿ ಮುಕ್ತನಿಧಿ ಯೋಜನಾಯಡಿಯಲ್ಲಿ ಪೂರ್ಣಗೊಂಡ ಕಾಮಗಾರಿಗಳ ತಪಾಸಣಾ ವರದಿಗೆ 3ನೇ ವ್ಯಕ್ತಿಯನ್ನು ನೇಮಿಸಲಾಗಿರುತ್ತದೆ. ಸದರಿ ರವರು ಕಾಮಗಾರಿಗಳ ಗುಣಮಟ್ಟದ ವರದಿಯನ್ನು ನೀಡಿದ ನಂತರವೇ ಗುತ್ತಿಗೆದಾರರಿಗೆ ಬಿಲ್‌ಪಾವತಿಸಲು ಕ್ರಮವಹಿಸಲಾಗುತ್ತಿದೆ. ಮುಂದುವರೆದು ಕಳಪೆ ಗುಣಮಟ್ಟದ ಕಾಮಗಾರಿ ಪ್ರಕರಣಗಳು ಕಂಡುಬಂದಲ್ಲಿ, ಅಂತಹ ಗುತ್ತಿಗೆದಾರರ ವಿರುದ್ಧ ನಿಯಮಾನುಸಾರ ಕ್ರಮ ಜರುಗಿಸಲಾಗುವುದು. |

ಕಡತ ಸಂಖ್ಯೆ:ನಅಇ 429 ಎಸ್.ಎಫ್.ಸಿ 2020

**(ಬಿ.ಎ ಬಸವರಾಜ)**
ನಗರಾಭಿವೃದ್ಧಿ ಸಚಿವರು